Sri T. SIDDALINGAIYA.—Any representation by them will be considered by the Government.

Janab J. MAHOMED IMAM.—As was done last time, will the Government be pleased to send for the leading people in the State and ascertain their views? It does not cost them anything.

Sri T. SIDDALINGAIYA.—I do not think that the Government should take the initiative in the matter. There is the University Council which will do all that.

Janab J. MAHOMED IMAM.—Will the Government refer this to the University Council with the direction that the matter is pending for a long time and that action should be taken immediately?

Sri T. SIDDALINGAIYA.—We will consider that.

Mr. SPEAKER.—Next question.

Primary, Middle and High Schools in the State.

*Q.—111. **Sri B. HUTCHE GOWDA** (Tumkur District—General).—

Will the Government be pleased to state:—

(*a*) during the years 1947-48, 1948-49, 1949-50, and 1950-51,—

(i) the number of Primary Schools and students therein;

(ii) the number of Middle Schools and students therein;

(iii) the number of High Schools and students therein;

(*b*) out of the above, the number run by Government, the number run by private institutions, the number run by Municipalities and the number run by District Boards?

*A.—**Sri T. SIDDALINGAIYA** (Minister for Education and Public Health).—

(*a*) and (*b*).—

Year	High Schools		Middle Schools		Primary Schools	
	No.	Strength	No.	Strength	No.	Strength
1947-48 ...	127	32,736	617	97,760	9,285	519,556
1948-49 ...	166	51,261	701	113,951	9,766	587,539
1949-50 ...	189	56,257	709	123,461	10,166	Not yet compiled
1950-51 ...	Figures not yet compiled					

Kinds of High Schools					Kinds of Middle Schools				Kinds of Primary Schools			
Government	District Board	Municipal	Aided	Unaided	Government	Municipal	Aided	Unaided	Government	Municipal	Aided	Unaided
27	...	56	29	15	538	...	49	10	7,785	...	1,489	11
33	8	63	56	6	626	4	62	9	8,229	35	1,494	8
38	16	64	61	10	628	4	67	10	Not yet compiled			

NOTE.—The information furnished in respect of the year 1949-50 is provisional.

ಶ್ರೀ ಬಿ. ಹುಚ್ಚೇಗೌಡರು.—ಇಲ್ಲಿ ಕೊಟ್ಟಿರುವುದರಲ್ಲಿ 1949-50ನೆಯ ಇಸವಿಯಲ್ಲಿ 709 ಮಿಡ್ಲ್ ಸ್ಕೂಲು ಗಳಿದ್ದುವೆಂದು ಹೇಳಿದ್ದೀರಿ. ಇದರಲ್ಲಿ incomplete ಮಿಡ್ಲ್ ಸ್ಕೂಲುಗಳೂ ಸೇರಿವೆಯೇ?

* ಶ್ರೀ ಟಿ. ಸಿದ್ದಲಿಂಗಯ್ಯನವರು.—ಸೇರಿಲ್ಲ. ಇವೆಲ್ಲ complete ಮಿಡ್ಲ್ಸ್ಕೂಲುಗಳು.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ 1950 ನೆಯ ಮಾರ್ಚಿನಲ್ಲಿದ್ದ incomplete ಮಿಡ್ಲ್ಸ್ಕೂಲು ಗಳ ಸಂಖ್ಯೆಯನ್ನು ತಿಳಿಸುತ್ತೀರಾ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆ ಬಗ್ಗೆ ಅಂಕ ಅಂಶಗಳನ್ನು ಶೇಖರಿಸಿಲ್ಲ. ಆದ್ದರಿಂದ ಹೇಳಲಾರೆ.

ಶ್ರೀ ಬಿ. ಹುಚ್ಚೇಗೌಡರು.—ನುಮಾರು 300 ಇರಬಹುದೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇರಬಹುದು.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಇಲ್ಲಿ ಕೊಟ್ಟಿರುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಆ ಸ್ಕೂಲಿನ ವಿದ್ಯಾರ್ಥಿಗಳನ್ನು ಸೇರಿಸಿಲ್ಲ ಅಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸೇರಿಸಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಮಿಡ್ಲ್ ಸ್ಕೂಲುಗಳಲ್ಲಿರುವ ವಿದ್ಯಾರ್ಥಿಗಳೆಂದಮೇಲೆ ಎಲ್ಲಾ ಮಿಡ್ಲ್ ಸ್ಕೂಲುಗಳಲ್ಲಿರುವವರನ್ನೂ ಸೇರಿಸಬೇಕಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಪ್ರೈಮರಿ ಸ್ಕೂಲಿಗೆ ಒಬ್ಬ ಇಂಗ್ಲೀಷ್ ಉಪಾಧ್ಯಾಯರನ್ನು ಕೊಟ್ಟು ಬಿಟ್ಟರೆ ಅದು ನ್ಯೂ ಟೈಪ್ ಮಿಡ್ಲ್ ಸ್ಕೂಲ್ ಆಗುತ್ತದೆ. ಆದ್ದರಿಂದ ಅದನ್ನು complete ಮಿಡ್ಲ್ ಸ್ಕೂಲೆಂದು ಎಣಿಸುವುದಕ್ಕಾಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ನ್ಯೂ ಟೈಪ್ ಮಿಡ್ಲ್ ಸ್ಕೂಲಿನ ವಿದ್ಯಾರ್ಥಿಗಳೂ ಮಿಡ್ಲ್ ಸ್ಕೂಲ್ ಪರೀಕ್ಷೆಗೆ ಕುಳಿತುಕೊಳ್ಳುವುದಿಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಕುಳಿತುಕೊಳ್ಳುತ್ತಾರೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಅವರ ಸಂಖ್ಯೆಯನ್ನು ಸೇರಿಸಬೇಕಲ್ಲವೇ ?

Sri T. SIDDALINGAIYA.—Government are not satisfied about these new type middle schools. We want to raise them to full status.

ಶ್ರೀ ಬಿ. ಹುಚ್ಚೇಗೌಡರು.—ಅದು ಸರಿ. ಆದರೂ ಮಿಡ್ಲ್ ಸ್ಕೂಲ್ ತರಗತಿಗಳಲ್ಲಿ ಓದುವವರೆಷ್ಟು ಮತ್ತು ಪ್ರೈಮರಿ ತರಗತಿಗಳಲ್ಲಿ ಓದುವವರೆಷ್ಟು ಎಂಬುದನ್ನು ಹೇಳುವುದಕ್ಕಾಗುವುದಿಲ್ಲವೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆ ಅಂಕಿಗಳನ್ನೆಲ್ಲಾ ಶೇಖರಿಸಬೇಕಾದರೆ ಸ್ವಲ್ಪ ಕಾಲಾವಕಾಶ ಬೇಕು. ನಡ್ಮದಲ್ಲಿ ಆ ಅಂಕಿಗಳು ನಮ್ಮಲ್ಲಿಲ್ಲ. ಬೇಕಾದರೆ ಆ ಮೇಲೆ ಹೇಳುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು.—ಈಗಿರುವ incomplete ಮಿಡ್ಲ್ ಸ್ಕೂಲುಗಳೆಲ್ಲವನ್ನೂ ಪಕ್ಕಾ ಸ್ಕೂಲುಗಳಾಗಿ ಪರಿವರ್ತನೆ ಮಾಡಬೇಕೆಂದಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹಾಗೆ ಮಾಡಬೇಕೆಂದು ಸರ್ಕಾರಕ್ಕೆ ಆಸೆಯಿದೆ.

ಶ್ರೀ ಬಿ. ಹುಚ್ಚೇಗೌಡರು.—ಈಗಿರುವಂತೆ incomplete ಮಿಡ್ಲ್ ಸ್ಕೂಲುಗಳೇ ಇದ್ದರೆ ಸರ್ಕಾರಕ್ಕೆ ಕಡಿಮೆ ಖರ್ಚಾಗುವುದಿಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೀವು ಹೇಳುವಂತೆ ಕಡಿಮೆ ಖರ್ಚಿನಲ್ಲೇನೋ ನಡೆಯುತ್ತದೆ. ಆದರೆ ಸರಿಯಾದಂಥ ವಿದ್ಯಾಭ್ಯಾಸವಾಗುವುದಿಲ್ಲ. ಆದ್ದರಿಂದ ಇವುಗಳನ್ನೂ ಪೂರ್ತಿ ಮಿಡ್ಲ್ ಸ್ಕೂಲಾಗಿ ಮಾಡಬೇಕಾದ್ದು ಅಗತ್ಯವೆಂದು ಸರ್ಕಾರದವರ ಅಭಿಪ್ರಾಯ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಈಗಿರತಕ್ಕ ಮಿಡ್ಲ್ ಸ್ಕೂಲ್ ವಿದ್ಯಾಭ್ಯಾಸದ ಪದ್ಧತಿಯನ್ನು ಬದಲಾಯಿಸುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆ ಪದ್ಧತಿಯನ್ನು ಬದಲಾಯಿಸುವುದೂ ಆಲೋಚನೆಯಲ್ಲಿದೆ. ಆದರೆ ಅದು ಇದಕ್ಕೆ ಸಂಬಂಧಪಟ್ಟಿಲ್ಲ.

Sri G. VEERAPPA (Chitaldrug District—General).—Is there any time limit to convert these incomplete middle schools into *pucca* middle schools ?

Sri T. SIDDALINGAIYA.—I have answered that question.

Sri G. VEERAPPA.—Is there any time limit within which these incomplete middle schools must be converted into *pucca* middle schools ?

Sri T. SIDDALINGAIYA.—As and when finances permitting.

Sri G. VEERAPPA.—I want to know whether for want of buildings a number of middle schools are not working properly ?

Sri T. SIDDALINGAIYA.—I do not know its effect. Anyway there are a number of schools which have no buildings.

Sri G. VEERAPPA.—Is it a fact that there has been a Government Order with regard to schools directing that the construction of the buildings must be stopped now, even if they have been undertaken ?

Sri T. SIDDALINGAIYA.—There are some cases like that.

Sri G. VEERAPPA.—Is there a general order directing that all these primary, middle and high school buildings must be stopped now at whatever stage they might be ?

Sri T. SIDDALINGAIYA.—In a few cases it has been done; not in all cases.

Sri G. VEERAPPA.—So there is no general order ?

Mr. SPEAKER.—The question of buildings does not arise.

ಶ್ರೀ ಎಸ್. ಕರಿಯಪ್ಪನವರು (ಬೆಂಗಳೂರು ಜಿಲ್ಲೆ).—ಈ Incomplete ಮಿಡ್ಲ್ ಸ್ಕೂಲುಗಳು ನಮ್ಮಲ್ಲಿ ಯಾವಾಗ ಪ್ರಾರಂಭವಾದ್ದು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈಚೆಗೆ 1942-43 ರಿಂದ.

ಶ್ರೀ ಎಸ್. ಕರಿಯಪ್ಪನವರು.—ಹಾಗಾದರೆ ಇವಲ್ಲದೆ ನ್ಯೂ ಟೈಪ್ ಮಿಡ್ಲ್ ಸ್ಕೂಲುಗಳೆಂದು ಬೇರೆ ಇವೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಉತ್ತರ ಆಗಲೇ ಹೇಳಿದ್ದೇನೆ.

ಶ್ರೀ ಕರಿಯಪ್ಪನವರು.—ಇವುಗಳಿಗೆ ಕಟ್ಟಡಗಳನ್ನು ಕಟ್ಟಿಸುವುದರಲ್ಲಿ ದಾನಿಗಳು ಎಷ್ಟು ಧರ್ಮದ್ರವ್ಯವನ್ನು ಕೊಟ್ಟಿದ್ದಾರೋ, ಅಷ್ಟರಲ್ಲೇ ಕಟ್ಟಿಕೊಳ್ಳಬೇಕೆಂದು ಹೇಳಿದ್ದೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಎಲ್ಲೆಲ್ಲಿ ಕಟ್ಟಡಗಳನ್ನು ಕಟ್ಟಬೇಕೆಂದು ಹೇಳಿ ಸರ್ಕಾರದ ಭಾಗದ 'ಕೋಟಾ'ವನ್ನು ಕೊಡಬೇಕೆಂದು ಕೇಳಿದ್ದಾರೋ ಅವರಿಗೆ ಸದ್ಯಕ್ಕೆ ಸರ್ಕಾರದವರು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ಅವರೇ ಬೇಕಾದರೆ ಕಟ್ಟಿಕೊಳ್ಳಬಹುದೆಂದು ಹೇಳಿದ್ದೇವೆ.

ಶ್ರೀ ಎಸ್. ಕರಿಯಪ್ಪನವರು.—ಎರ್ಲೆಲ್ಲಿ ಆ ರೀತಿ ಕೇಳಿ ಅವರೇ ಕಟ್ಟಿಕೊಳ್ಳುವುದಕ್ಕೆ ಅನುಮತಿ ಕೊಟ್ಟಿದ್ದೀರಿ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದನ್ನು ಹೇಳುವುದಕ್ಕೆ ದೊಡ್ಡ ಪಟ್ಟಿಯಾಗುತ್ತದೆ; ಕಾಲ ಹಿಡಿಯುತ್ತದೆ.

ಶ್ರೀ ಎಸ್. ಕರಿಯಪ್ಪನವರು.—ಈ ಕಟ್ಟಡ ಕಟ್ಟಿಸುವುದನ್ನು ನೋಡಿಕೊಳ್ಳುವವರು ಇಂಜಿನಿಯರಿಂಗ್ ಇಲಾಖೆಯವರೇ ಅಥವಾ ಮುನಿಸಿಪಾಲಿಟಿಯವರೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇದುವರೆಗೂ ಇಂಜಿನಿಯರಿಂಗ್ ಇಲಾಖೆಯವರೇ ನೋಡಿಕೊಳ್ಳುತ್ತಿದ್ದರು. ಈಚೆಗೆ ಈ ವಿಚಾರದಲ್ಲಿ ಡಿಸ್ಟ್ರಿಕ್ಟ್‌ನವರ ಕಡೆಯಿಂದ ಕೋರಿಕೆಗಳೇನಾದರೂ ಬಂದರೆ ಅವರಿಗೂ ಅವಕಾಶ ಕೊಡುತ್ತಿದ್ದೇವೆ.

ಶ್ರೀ ಎಸ್. ಕರಿಯಪ್ಪನವರು.—ಅಂದರೆ, ಕಟ್ಟಡಗಳನ್ನು ಕಟ್ಟಿಸುವ ಜವಾಬ್ದಾರಿಯನ್ನು ಮುನಿಸಿಪಾಲಿಟಿಗಳಿಗೆ ವಹಿಸಿದ್ದೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನಾವು ವಹಿಸಿಲ್ಲ. ಅವರೇ ಬಂದು ತಾವೇ ಮಾಡಿಕೊಳ್ಳುತ್ತೇವೆಂದು ಹೇಳಿದಾಗ ಅವರಿಗೆ ಅನುಮತಿಕೊಟ್ಟಿದೆ.

Sri H. SIDDAVEERAPPA (Chitaldrug District—General).—May I know how many new type middle schools there are in the State ?

Sri T. SIDDALINGAIYA.—About five hundred to six hundred.

Sri H. SIDDAVEERAPPA.—Are there any new type middle schools which have been converted into *pucca* middle schools this year, *i.e.*, 1950-51 ?

Sri T. SIDDALINGAIYA.—There are some.

Sri H. SIDDAVEERAPPA.—May I know approximately the number ?

Sri T. SIDDALINGAIYA.—Very few; negligible; may be 8 or 10.

Sri H. SIDDAVEERAPPA.—Have the Government any scheme in view whereby within a specified period all these new type middle schools can be converted into *pucca* middle schools ?

Sri T. SIDDALINGAIYA.—That is under contemplation, not yet decided.

Sri H. SIDDAVEERAPPA.—Are the Government getting any annual reports regarding the working of these high, middle and primary schools—how many are flourishing and how many are in a languishing condition, etc. ?

Sri T. SIDDALINGAIYA.—All are in good condition.

Sri H. SIDDAVEERAPPA.—May I know whether the standard particularly in some of the high schools has not suffered for want of proper equipment and teaching personnel ?

Sri T. SIDDALINGAIYA.—It is possible. But everything is being looked into.

Sri H. K. VEERANNA GOWDA (Mandya District—General).—May I take it for granted that the number given of new type middle schools as five hundred to six hundred is correct ?

Mr. SPEAKER.—On the face of it it is not correct.

(Laughter.)

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಈ ವರ್ಷ ಹೊಸದಾಗಿ ಎಷ್ಟು ಮಿಡ್ಲ್ ಸ್ಕೂಲುಗಳನ್ನು, ಎಷ್ಟು ಹೈಸ್ಕೂಲುಗಳನ್ನು ಮತ್ತು ಎಷ್ಟು ಹೈಸ್ಕೂಲುಗಳನ್ನು ಕೊಟ್ಟಿದ್ದೀರಿ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈ ವರ್ಷಕ್ಕೆ ಸಂಬಂಧಪಟ್ಟ ಪಟ್ಟಿ ತರಿಸಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ನಾನು ಕೇಳಿದ್ದು, ಪಟ್ಟಿಯನ್ನಲ್ಲ. ಹೊಸದಾಗಿ ತಾವು ಎಷ್ಟು ಮಂಜೂರು ಮಾಡಿದ್ದೀರಿ ಎಂಬುದನ್ನು.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದನ್ನು ಹೇಳುವುದಕ್ಕೆ ಪಟ್ಟಿ ಈಗ ನನ್ನಲ್ಲಿಲ್ಲವೆಂದು ಹೇಳಬೇಕಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹೈಸ್ಕೂಲುಗಳನ್ನು ಎಷ್ಟು ಮಂಜೂರುಮಾಡಿದ್ದೀರಿ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದಕ್ಕೂ ನಿರ್ದಿಷ್ಟವಾಗಿ ಹೇಳಬೇಕಾದರೆ ನೋಟೀಸ್ ಬೇಕು. ಸುಮಾರು 15—16 ಆಗಿರಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹೈಸ್ಕೂಲುಗಳು ಮಂಜೂರಾಗಿ ಸರ್ಕಾರಿ ಹುಕುಮಾಗಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಮಂಜೂರಾಗಿರುವುದು ಸುಮಾರು 5—6 ಇರಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಅವು ಸರ್ಕಾರಿ ಹೈಸ್ಕೂಲುಗಳೇ, ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲುಗಳೇ ಅಥವಾ ಮುನಿಸಿಪಲ್ ಹೈಸ್ಕೂಲುಗಳೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸರ್ಕಾರಿ ಹೈಸ್ಕೂಲುಗಳು ಯಾವುವೂ ಇಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಸರ್ಕಾರಿ ಹೈಸ್ಕೂಲು ಒಂದೂ ಇಲ್ಲವೆಂದ ಮೇಲೆ ಇವು ಯಾವ ಹೈಸ್ಕೂಲುಗಳು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲುಗಳು ಅಥವಾ ಮುನಿಸಿಪಲ್ ಹೈಸ್ಕೂಲುಗಳಾಗಿರಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹತ್ತು ಸರ್ಕಾರಿ ದ್ರವ್ಯ ಸಹಾಯ ಪಡೆಯದೆ ಇರುವ ಹೈಸ್ಕೂಲುಗಳಿವೆಯೆಂದು ಹೇಳಿದ್ದೀರಿ. ಸರ್ಕಾರಿ ದ್ರವ್ಯ ಪಡೆಯದ ಎಂದರೆ ತಮ್ಮನ್ನು ಸಹಾಯ ದ್ರವ್ಯ ಕೇಳದೆ ತಾವೇ ಮಾಡಿಕೊಂಡಿರುವಂಥವುಗಳೇ ಅಥವಾ ತಮ್ಮನ್ನು ಕೇಳಿಯೂ ತಾವು ಸಹಾಯ ಕೊಡದಿರುವಂಥವುಗಳೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಕೇಳದಿರುವುವುಗಳೂ ಒಂದೆರಡಿವೆ. ಮಿಕ್ಕವರು ಕೇಳಿಯೂ ಸರ್ಕಾರದವರು ಕೊಟ್ಟಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಅವುಗಳನ್ನು recognise ಮಾಡಿದ್ದೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು—ಕೆ ಲ ವ ನ್ನು recognise ಮಾಡಿದೆ. ಬಹುಶಃ ಕೊನೆಗೆ ಎಲ್ಲವನ್ನೂ recognise ಮಾಡಲೇಬೇಕಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಕೆಲವನ್ನು ಮಾತ್ರ ಮಾಡೋಣವಾಗಿದೆಯೆಂದು ತಾವು ಹೇಳೋಣವಾಯಿತು. ಹಾಗಾದರೆ unrecognised High Schoolsನಲ್ಲಿರತಕ್ಕ ಹುಡುಗರು ಪರೀಕ್ಷೆಗೆ ಹೇಗೆ ಕುಳಿತುಕೊಳ್ಳುತ್ತಾರೆ ;

Sri T. SIDDALINGAIYA.—In view of that inconvenience to boys, Government are going to recognise the schools if they properly educate the boys. There will not be any difficulty so far as their examinations are concerned.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಅ ಡಿಸ್ಟ್ರಿಕ್ಟ್ ಬೋರ್ಡು ಹೈಸ್ಕೂಲುಗಳನ್ನು ತಾವು ಮಂಜೂರು ಮಾಡುವುದು ಚಾಲ್ತಿ ಸಾಲು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿಯೋ ಅಥವ ಅದು ಪ್ರಾರಂಭವಾದ 3–4 ತಿಂಗಳ ನಂತರವೋ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸಾಧಾರಣವಾಗಿ ಅದನ್ನು ವರ್ಷಾರಂಭವಾಗುವುದರೊಳಗಾಗಿಯೇ ಮಂಜೂರು ಮಾಡಬೇಕಾಗುತ್ತದೆ. That is a correct principle, I admit.

Sri H. M. CHANNABASAPPA.—Are the Government aware that schools have been sanctioned six months, eight months, one year after the commencement of academic year ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಜಿಲ್ಲಾಬೋರ್ಡಿನವರು ಎಷ್ಟೆಷ್ಟರಮಟ್ಟಿಗೆ ಅವರೆಲ್ಲರೂ ಬಂದು ಒತ್ತಾಯವಾಡುತ್ತಾರೋ ಅದರ ಪ್ರಕಾರ ಅವುಗಳನ್ನು ಮಂಜೂರು ಮಾಡಲಾಗುತ್ತದೆ.

Sri L. SIDDAPPA (Shimoga District-General).—Is he referring to the particular District Board President ?

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಮುನಿಸಿಪಾಲಿಟಿಗಳು ಮತ್ತು ಜಿಲ್ಲಾಬೋರ್ಡುಗಳವರು ಈ ಹೈಸ್ಕೂಲುಗಳನ್ನು ನಡೆಸುವುದಕ್ಕೆ ನಮ್ಮಿಂದ ಸಾಧ್ಯವಿಲ್ಲ, ಇವುಗಳನ್ನೆಲ್ಲಾ ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ಹೇಳಿ ತಮಗೆ ಅವರಿಂದ ಅರ್ಜಿಗಳೇನಾದರೂ ಬಂದಿದೆಯೇ ಸ್ವಾಮಿ !

Mr. SPEAKER.—That supplementary does not arise.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು (ಚಿತ್ರದುರ್ಗ ಜಿಲ್ಲೆ).—ನಮ್ಮ ಸಂಸ್ಥಾನದಲ್ಲಿ ಪ್ರಾಥಮಿಕ ಪಾಠಶಾಲೆಗಳನ್ನು ಪ್ರತಿವರ್ಷವೂ ಒಂದು ನಿರ್ದಿಷ್ಟವಾದ ಕ್ರಮದಲ್ಲಿ ಪ್ರಾರಂಭಿಸಬೇಕೆಂಬುದು ಸರ್ಕಾರದ ವರ ನೀತಿಯಾಗಿದೆಯಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು—ಹೌದು.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಈಗ ನಮ್ಮ ಸಂಸ್ಥಾನದಲ್ಲಿರುವ 16,434 ಗ್ರಾಮಗಳ ಪೈಕಿ 6,420 ಗ್ರಾಮಗಳನ್ನು ಮಾತ್ರ ಸರ್ಕಾರಿ ಪ್ರೈಮರಿ ಸ್ಕೂಲುಗಳಿದ್ದು ಬಾಕಿ ಗ್ರಾಮಗಳಲ್ಲಿ ಪಾಠಶಾಲೆಗಳೇ ಇರುವುದಿಲ್ಲವೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಬಂದಿದೆ. ಆದರೆ ಅಷ್ಟು ಇರಲಾರವು. The number is not correct.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಸಂಸ್ಥಾನದಲ್ಲಿರುವ ಗ್ರಾಮಗಳಿಗೆಲ್ಲ ಪಾಠಶಾಲೆಗಳನ್ನು ಒದಗಿಸಲು ವರ್ಷ ವರ್ಷ 400 ಪಾಠಶಾಲೆಗಳಂತೆ ಸರ್ಕಾರದವರು ಕಳೆದ 8–9 ವರ್ಷಗಳಿಂದಲೂ ಮಂಜೂರು ಮಾಡುತ್ತ ಬಂದಿಲ್ಲವೇ ;

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆದುದರಿಂದಲೇ ಈಗ ಸುಮಾರು 9,000 ಪಾಠಶಾಲೆಗಳೂ ಮಂಜೂರಾಗಿರುವುದು.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಅದರ ಪ್ರಕಾರ ಈಗ ತಾವು ಜಾರಿಗೆ ತರಲು ಸಾಧ್ಯವಾಗಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸಾಧ್ಯವಾಗಿದೆ.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಈ ವರ್ಷ ತಾವು ಎಷ್ಟು ಪಕ್ಕಾ ಮಿಡಲ್ ಸ್ಕೂಲುಗಳು ಮಂಜೂರು ಮಾಡಿದ್ದೀರಿ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದಕ್ಕೆ ಉತ್ತರವನ್ನು ನಾನಾಗಲೇ ತಿಳಿಸಿದ್ದೇನೆ.

ಶ್ರೀ ಬಿ. ಚನ್ನಬೈರೇಗೌಡರು.—ಸುಮಾರು 40 ಪಾಠಶಾಲೆಗಳನ್ನು ಮಂಜೂರು ಮಾಡಬೇಕೆಂದಿಲ್ಲವೇ;

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸಾಧಾರಣವಾಗಿ ಆ ಸಂಖ್ಯೆಯಲ್ಲೇ ಮಂಜೂರಾಗುತ್ತದೆ.

ಶ್ರೀ ಬಿ. ಚನ್ನಬೈರೇಗೌಡರು.—ಈ ಸಾಲಿನಲ್ಲಿ ಎಷ್ಟು ಪಾಠಶಾಲೆಗಳನ್ನು ಮಂಜೂರು ಮಾಡಲಾಯಿತು.

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಬಿ. ಚನ್ನಬೈರೇಗೌಡರು.—10 ಸಾವಿರ ಪಾಠಶಾಲೆಗಳ ಪೈಕಿ ಎಷ್ಟು ಸರ್ಕಾರಿ ಕಟ್ಟಡದಲ್ಲಿವೆ ? ಎಷ್ಟು ಖಾಸಗಿ ಕಟ್ಟಡದಲ್ಲಿವೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಬಿ. ಚನ್ನಬೈರೇಗೌಡರು.—ಅಷ್ಟು ಬೇಗ ಈ ಬಾಡಿಗೆ ಕಟ್ಟಡಗಳಲ್ಲಿರುವ ಪಾಠಶಾಲೆಗಳಿಗಾದರೂ ಸರ್ಕಾರಿ ಕಟ್ಟಡಗಳನ್ನೊದಗಿಸಲು ಏರ್ಪಾಡುಮಾಡುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಮಾಡುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡರು.—ಈಗ ತಾವು ಮಂಜೂರು ಮಾಡಿರುವ ಹೈ ಪ್ರೈಮರಿ ಮತ್ತು ಮಿಡಲ್ ಪಾಠಶಾಲೆಗಳಲ್ಲಿ ಬಾಲಕರಿಗೆ ಮರದ ಸಾಮಾನುಗಳನ್ನೆನೇ ಒದಗಿಸಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇಲ್ಲ; ತಿಳಿಸಿದರೆ ಅವುಗಳಿಗೆ ಒದಗಿಸಲು ಏರ್ಪಾಡುಮಾಡುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡರು.—ಇನ್ನೆಷ್ಟು ವರ್ಷಗಳಲ್ಲಿ ಕೊಡುವುದಕ್ಕೆ ಏರ್ಪಾಡುಮಾಡುತ್ತೀರಿ, ಸ್ವಾಮಿ !

Mr. SPEAKER.—The question does not arise.

ಶ್ರೀ ಬಿ. ಚನ್ನಬೈರೇಗೌಡರು.—1949-50ಕ್ಕೆ 16 ಹೈಸ್ಕೂಲುಗಳನ್ನು ಮಂಜೂರು ಮಾಡಲಾಗಿದೆಯೆಂದು ಪ್ರಶ್ನೋತ್ತರ ಪುಸ್ತಕದ III ಭಾಗದಲ್ಲಿಯೂ ಮತ್ತು 19 ಪಾಠಶಾಲೆಗಳನ್ನು ಮಂಜೂರು ಮಾಡಲಾಗಿದೆಯೆಂದು ಪ್ರಶ್ನೋತ್ತರಗಳ IV ಭಾಗದಲ್ಲಿಯೂ ನಮೂದಿಸಲಾಗಿದೆ. ಈ ಪೈಕಿ 16 ಹೈಸ್ಕೂಲುಗಳೆಂಬುದು ನಿಜವೋ ಅಥವಾ 19 ಹೈಸ್ಕೂಲುಗಳೆಂಬುದು ನಿಜವೋ !

ಶ್ರೀ ಟಿ. ಸಿದ್ದಲಿಂಗಯ್ಯನವರು.—ನಾವು ಕೆಲವನ್ನು ಕೊಟ್ಟಿದ್ದೇವೆ. ಇನ್ನು ಕೆಲವನ್ನು ಅವರೇ ಏರ್ಪಾಡು ಮಾಡಿಕೊಂಡಿದ್ದಾರೆ.

ಶ್ರೀ ಬಿ. ಚನ್ನಬೈರೇಗೌಡರು.—ಈ ಎರಡರಲ್ಲಿ ಯಾವುದು ಸರಿಯಾದದ್ದು?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅವುಗಳೆರಡೂ ಬೇರೆ ಬೇರೆ ಪ್ರಶ್ನೆಗಳು. ಆದುದರಿಂದ ಬೇರೆ ಬೇರೆ ಉತ್ತರಗಳನ್ನೊದಗಿಸಲಾಗಿದೆ.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಈ ವರ್ಷ ತಾವೇನಾದರೂ ಹೊಸದಾಗಿ ನ್ಯೂ ಟೈಪ್ ಮಿಡಲ್ ಸ್ಕೂಲುಗಳನ್ನು ಕೊಟ್ಟಿದ್ದೀರಾ ಸ್ವಾಮಿ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಕೊಟ್ಟಿದ್ದೇವೆ.

ಶ್ರೀ ಎ. ಭೀಮಪ್ಪನಾಯಕರು.—ಎಷ್ಟು?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಎ. ಭೀಮಪ್ಪನಾಯಕರು.—ಸುಮಾರು 50ಕ್ಕೆ ಮೇಲ್ಪಟ್ಟು 60ರ ಒಳಗೇ ಇರಬಹುದಲ್ಲವೇ?

ಶ್ರೀ ಟಿ. ಸಿದ್ದ ಲಿಂಗಯ್ಯನವರು.—ಹೌದು.

ಶ್ರೀ ಎ. ಭೀಮಪ್ಪನಾಯಕರು.—ಸರ್ಕಾರದವರು ಈ ಸಂಬಂಧವಾಗಿ ಎಷ್ಟು ತಾವು ಕೋಟಾ ಕೊಡಬೇಕಾಗಿತ್ತೋ ಅಷ್ಟನ್ನೂ ಈ ಹಣಕಾಸಿನ ಮುಗ್ಗಟ್ಟಿನಿಂದ ಈಗ ಕೊಡುತ್ತಿಲ್ಲ ಅಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈಗಲೂ ಕೊಡುತ್ತಿದ್ದೇವೆ.

ಶ್ರೀ ಎ. ಭೀಮಪ್ಪನಾಯಕರು.—ಹಾಗೆ ಹಣವನ್ನು ತಮಗೆ ಕೊಡಲಕ್ಕಾಗದಿದ್ದ ಭಾಗದಲ್ಲಿ ಖಾಸಗೀ ಜನರು ತಮ್ಮಿಂದ ಮುಂಗಡವಾಗಿ ತೆಗೆದುಕೊಂಡಿರುವ ಮೊಬಲಗನ್ನಾದರೂ ವಾಪಸ್ಸು ತೆಗೆದುಕೊಳ್ಳಲು ಅವಕಾಶ ಮಾಡಿಕೊಡುತ್ತೀರಾ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಎಲ್ಲೆಲ್ಲಿ ಅನಾನುಕೂಲತೆ ಹೆಚ್ಚಾಗಿದೆಯೋ ಅಲ್ಲಿಗೆ ಮೊದಲು ಸಹಾಯ ನೀಡುವಂತೆ ಏರ್ಪಾಡು ಮಾಡಲಾಗಿದೆ.

Sri H. C. LINGA REDDY (Kolar District—General).—Has it come to the notice of the Government that some of the District Board High Schools do not have proper buildings?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆ.

Sri H. C. LINGA REDDY.—Are the scales of pay of the teachers in Government High Schools, Municipal High Schools and District Board High Schools uniform?

Mr. SPEAKER.—That does not arise.

Sri V. S. NARAYANA RAO (Bangalore City—General).—How many primary schools in the State are basic education schools?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಬೇಸಿಕ್ ಎಜ್ಯುಕೇಷನ್ ಸ್ಕೂಲೆಂದು ಪ್ರತ್ಯೇಕವಾಗಿ ಯಾವುದನ್ನೂ ಸ್ಥಾಪಿಸಿಲ್ಲ. ಬೇಸಿಕ್ ಟ್ರೈನಿಂಗ್ ಸ್ಕೂಲೆಂಬುದಾಗಿ ಉತ್ತನಹಳ್ಳಿಯಲ್ಲಿ ಒಂದು ಟ್ರೈನಿಂಗ್ ಸೆಂಟರನ್ನು ಮಾತ್ರ ತೆರೆಯಲಾಗಿದೆ.

Preventing quacks practising in the State.

*Q.—116. **Sri Kadidal MANJAPPA** (Shimoga District—General).—

Will the Government be pleased to State :—

(*a*) whether they are aware that there are large number of quacks practising in the State as doctors;

(*b*) whether they have taken any step to prevent these quacks from practising?

*A.—**Sri T. SIDDALINGAIYA** (Minister for Education and Public Health).—(*a*) Government are aware that a few quacks are practising in the State as doctors.

(*b*) There is no law at present by which quackery can be prevented.

Sri Kadidal MANJAPPA.—What is the number of quacks practising in the State—both Allopathic, Ayurvedic and Unani?

Sri T. SIDDALINGAIYA.—I think the questioner may give to me that information as to the number of quacks practising. I have no information about it.

Sri L. SIDDAPPA (Shimoga District—General).—So the Hon'ble Minister may please occupy the member's seat and the member his seat.

Sri T. SIDDALINGAIYA.—I think Hon'ble Member Sri Siddappa's inference is not correct.

Sri L. SIDDAPPA.—It is a suggestion; it is not an inference.

Sri Kadidal MANJAPPA.—I would like the Hon'ble Minister to make a list of quacks practising in the State.

Sri T. SIDDALINGAIYA.—We have to investigate and find the number of quacks that are available in the country and try to eliminate them.

Sri Kadidal MANJAPPA.—Do not the Government consider it their duty.....

Sri G. A. ACHARYA (Bangalore District—General).—I have not understood what is meant by 'quacks.'

Sri Kadidal MANJAPPA.—Unqualified medical practitioners. Is there any Act like the Registration of Medical Practitioner's Act?